# ಶಕ್ತಿಪಾತ ವಿದ್ಯೆ

ಹತ್ತು ವರ್ಷಗಳ ಹಿಂದಿನ ಮಾತು. ನಮ್ಮ ನಾಡಿನ ಸುವಿಖ್ಯಾತ ವಿದ್ವಾಂಸರಾದ ಪ್ರೊ. ಸಾ.ಕೃ. ರಾಮಚಂದ್ರರಾಯರ ಜತೆ ಒಂದು ಸಂಜೆ ಮಾತಾಡುತ್ತಿದ್ದೆ. ನನ್ನ ತಲೆಯ ತುಂಬಾ ಕಾಶ್ಮೀರದ ಅಭಿನವಗುಪ್ತನೇ ತುಂಬಿಕೊಂಡಿದ್ದ. ಆ ಮಹಿಮನ ಬಗೆಗೆ ಮಾತಾಡುತ್ತ, 'ಶಕ್ತಿಪಾತ' ಎಂಬ ಕ್ರಿಯೆಯ ಬಗೆಗೆ ಪ್ರಶ್ನಿಸಿದೆ. ಆಗ ಅವರು ಬಲು ಚಕಿತರಾಗಿ ನನ್ನನ್ನು ನೋಡಿದರು. ಸ್ವಲ್ಪಹೊತ್ತು ಕಣ್ಣು ಮುಚ್ಚಿಕೊಂಡಿದ್ದು, ಅನಂತರ ನನ್ನತ್ತ ಮುಗುಳ್ನಗೆ ಬೀರಿದರು. ನಾನು ಪರಮ ಕುತೂಹಲಿಗನಾಗಿ ಅವರತ್ತ ನೋಡಿದೆ. 'ಶಕ್ತಿಪಾತ' ಉಂಟು. ಅದು ಕೊಡುವವನ ಸಾಮರ್ಥ್ಯ ಮತ್ತು ತೆಗೆದುಕೊಳ್ಳುವವನ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಕಾಶ್ಮೀರದ ಶೈವದರ್ಶನ ಸಂಪ್ರದಾಯಕ್ಕೆ ಸೇರಿದ ಒಬ್ಬ ಸಜ್ಜನರು ಇಂಥ 'ಶಕ್ತಿಪಾತ' ಪಡೆದಿದ್ದರೆಂದು ತಮ್ಮ ಮಾತಿನ ನಡುವೆ ಹೇಳಿದರು. ಆದರೆ, ಅವರು ಈ ವಿಚಾರವನ್ನು ಮುಂದುವರಿಸಲಿಲ್ಲ. ನಾನೂ ಸುಮ್ಮನಾದೆ. ಆದರೆ, ಆ ಸಂಪ್ರದಾಯದಿಂದ ಪ್ರಭಾವಿತರಾಗಿ ಆ ವಿದ್ಯೆಯ ಉಪಾಸಕರಾಗಿದ್ದ ಡಾ. ನೀಲಕಂಠಸ್ವಾಮಿಗಳ ಪರಿಚಯ, ಸ್ನೇಹ–ಗುರುಭಕ್ತಿ ಬೆಳೆದು ನಾನು ಧನ್ಯನಾದೆ!

ಶಕ್ತಿಪಾತ ಎಂಬುದು ಒಂದು ವಿದ್ಯೆ. ಇದು ಕೊಡುವ ವಿದ್ಯೆಯೇ ಹೊರತು ಪಡೆಯುವುದಲ್ಲ. ಈ ಮಾತನ್ನು ಒಂದು ಲೌಕಿಕ ಉದಾಹರಣೆಯಿಂದ ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಮಾಡೋಣ. ಒಬ್ಬ ಶ್ರೀಮಂತ ತಂದೆ. ಅವನ ಬಳಿ ತುಂಬಾ ಸಂಪತ್ತಿದೆ. ಆದರೆ, ಅವನು ವಿವೇಚನೆ ಮಾಡದೆ ಏನನ್ನೂ ಕೊಡುವುದಿಲ್ಲ. ಪಡೆಯುವವನ ಯೋಗ್ಯತೆಯನ್ನು ಪರಿಶೀಲಿಸಿ ಹಣವನ್ನು ನೀಡುತ್ತಾನೆ. ಇದು ಪಾತ್ರತ್ವವನ್ನು ಅರಿಯುವ ಕ್ರಮ. ಯೋಗಮಾರ್ಗದಲ್ಲಿ ದೀಕ್ಷೆಯೆನ್ನುವುದು ಶಕ್ತಿಪಾತದ ಪ್ರಾಥಮಿಕ ಪ್ರಯೋಗ. ಉಪನಿಷತ್ ಕಾಲದಲ್ಲಿ 'ಅಂಗೀರಸ' ಎಂಬ ಋಷಿ ಇದ್ದ. ವೈದಿಕ ಋಷಿಗಳಲ್ಲಿ ಅನೇಕರಿಗೆ ಈತನೇ ನೆಲೆ. ಮುಂದಿನ ಅನೇಕ ಋಷಿಗಳು ಇವನ ಹೆಸರನ್ನು ಹೇಳುತ್ತ ತಮ್ಮ ಕುಲದವನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಅಂಗೀರಸನು ಋಷಿಗಳಲ್ಲಿ ಅತ್ಯಂತ ಆದ್ಯ. ಈತ ಆಧ್ಯಾತ್ಮಿಕವಾಗಿ ಬಲು ಶ್ರೀಮಂತ. ಇವನ ಮನೆಯಲ್ಲಿ ಹಸು–ಕುದುರೆಗಳೇನೂ ಇರಲಿಲ್ಲ. ಇವನು ಬಿಡದೆ ತಪಸ್ಸು ಮಾಡಿ ತನ್ನ ಕಾಲಮೇಲೆ ತಾನೆ ನಿಂತುಕೊಂಡು ಶ್ರೀಮಂತನಾದವನು. ಇವನು ತಪಸ್ಸಿನಿಂದ ದೊಡ್ಡವನಾಗಿ, ಇತರರಿಗೂ ಮಾದರಿಯಾದ ಮಹಾಶಕ್ತ ಋಷಿ. ಈತ ಯಾರ ಆಶ್ರಯವನ್ನು ಪಡೆಯದೆ ತನಗೆ ಬೇಕಾದುದನ್ನು 'ಸ್ವಯಮೇವ ಮೃಗೇಂದ್ರತಾ' ಎಂಬಂತೆ ಸಂಪಾದಿಸಿಕೊಂಡವನು. ತನ್ನ ಬಳಿ ಬಂದು ಬೇಡಿದವರಿಗೆ ಉದಾರವಾಗಿ ನೀಡಿದ ಮಹಾನುಭಾವ. ಇನ್ನೊಬ್ಬ ವೈದಿಕಋಷಿ 'ವಾಮದೇವ' ಸ್ವಯಂಪೂರ್ಣನಾದ ಮಹಾಋಷಿ. ಈ ಪರಂಪರೆಯ ಆಧುನಿಕರಲ್ಲಿ ಶ್ರೀರಾಮಕೃಷ್ಣ ಪರಮಹಂಸರು ನಿತ್ಯಸ್ಮರಣೀಯರು. ಶ್ರೀರಾಮಕೃಷ್ಣರಿಗೆ ಆಗಾಗ್ಗೆ ಅಶಕ್ತತೆ ಕಾಡುತ್ತಿತ್ತು. ಆಗ ಪ್ರಾರ್ಥನೆಯ ನೆರವಿನಿಂದ ಅದನ್ನು ತುಂಬಿಕೊಳ್ಳುತ್ತಿದ್ದರು. ಇವರ ಜೀವನದಲ್ಲಿ ತೋತಾಪುರಿ, ಬ್ರಾಹ್ಮಣ ಭೈರವಿ, ಪರಮಹಂಸರಿಗೆ ಅಗತ್ಯವಿದ್ದುದನ್ನು ಕೊಟ್ಟ ಸಂಗತಿಗಳನ್ನು ನಾವು ಕಾಣುತ್ತೇವೆ. ಶ್ರೀರಾಮಕೃಷ್ಣರು ನರೇಂದ್ರರನ್ನು ಕೋಣೆಯೊಳಕ್ಕೆ ಕರೆದೊಯ್ದು 'ಶಕ್ತಿಪಾತ' ಮಾಡಿದ್ದನ್ನು ನಾವು ಮರೆಯುವಂತಿಲ್ಲ! ಅದು ಮುಂದೆ ಸ್ವಾಮಿ ವಿವೇಕಾನಂದರಾಗಿ ರೂಪಾಂತರ ಪಡೆಯುವುದಕ್ಕೆ ಸಹಾಯಕವಾಯಿತು.

ನಾನು ತಿಳಿಸಿದಂತೆ ಶಕ್ತಿಪಾತ ಒಂದು ವಿದ್ಯೆಯಷ್ಟೆ. ಈ ಸಂಗತಿಯನ್ನು ವಿದ್ಯೆಯ ಉಪಾಸಕರು ಒಪ್ಪುತ್ತಾರೆ. ಆದರೆ, ಒಂದು ಅಂಶವನ್ನು ಇಲ್ಲಿ ಗಮನಿಸುವುದು ಅವಶ್ಯ. ಯೋಗಮಾರ್ಗದಲ್ಲಿ 'ದೀಕ್ಷೆ' ನೀಡುವುದು ಉಂಟಷ್ಟೆ. ಅದು ಕೇವಲ ಪ್ರಾಥಮಿಕ ಪ್ರಯೋಗ ಮಾತ್ರ. ಯೋಗವು ಸ್ವತಂತ್ರವಾದ ವ್ಯಕ್ತಿಮಾರ್ಗ. ಆದುದರಿಂದ, ಅದಕ್ಕೆ ಸಾಂಪ್ರದಾಯಿಕವಾದ ವಿಧಿಗಳೇನೂ ಇರುವುದಿಲ್ಲ. ಶಕ್ತಿಯ ಪ್ರಮಾಣ ಸಂಕುಚಿತವಾದಾಗ ವಿಧಿಯ, ಸಂಪ್ರದಾಯದ ಸಂಕೋಲೆ ಬೆಳೆಯುತ್ತಾ ಹೋಗುತ್ತದೆ. ಶಕ್ತಿಗೆ ವಿಧಿಯ ಸೂತಕವಿಲ್ಲ. ಶಕ್ತಿಪಾತ ಮಾಡುವವನಿಗೆ ಸಂಪ್ರದಾಯದ ವಿಧಿ ಗಂಟು ಬಿದ್ದಿದ್ದರೆ; ಅಂಥವನಿಗೆ ಕೆಲ ನಿಯಮಗಳು ಅನಿವಾರ್ಯವಾಗುತ್ತವೆ. ಈ ಎಲ್ಲಾ ನಿಯಮಗಳು ಬರಿ ಚೌಕಟ್ಟಿನ ಕೆಲಸಕ್ಕೆ ಬರುತ್ತವೆ. ಯಾರು ಶಕ್ತಿಪಾತ ಮಾಡುವವನೋ ಅವನ ಮನಸ್ಸು ಪೂರ್ಣರೀತಿಯಲ್ಲಿ ವಿಕಸಿತವಾಗಲಿ, ಪವಿತ್ರವಾಗಲಿ ಪುಣ್ಯಪ್ರದವಾಗಲಿ ಇರಬೇಕೆಂಬ ನಿಯಮವೇನೂ ಇಲ್ಲ. ಆದರೆ, ಆತನು ನೀಡುವ 'ಶಕ್ತಿಪಾತ' ಪ್ರಕ್ರಿಯೆ ಬೇರೆಯ ರೀತಿಯದೇ ಆಗಿರುತ್ತದೆ!

ಶಕ್ತಿಪಾತ ಕ್ರಮಗಳು ಅನೇಕ ಹಂತದಲ್ಲಿ ನಡೆಯುವುದುಂಟು. ಒಬ್ಬಾತನಿಗೆ ಬೇರೊಬ್ಬರನ್ನು ವಶಮಾಡಿಕೊಳ್ಳುವುದಕ್ಕೆ ಬಲಬೇಕು. ಮಗುದೊಬ್ಬನಿಗೆ ತನ್ನ ಯತ್ನವು ವಿಫಲವಾಗದಂತೆ ಇರುವ ಸಾಮರ್ಥ್ಯ ಬೇಕು. ಇನ್ನೊಬ್ಬನಿಗೆ ತನ್ನ ನಿರ್ಮಿತಿ ಅಮೂಲ್ಯವಾಗುವ 'ಶಕ್ತಿ' ಬೇಕು. ಹೀಗೆ 'ಶಕ್ತಿ' ಪಡೆಯಲು ಅನೇಕ ಕ್ರಮಗಳು ಬೇಕಾಗುತ್ತವೆ. ಯಾರು ಕೊಡುತ್ತಾರೋ ಅವರು ನೇರವಾಗಿ ಕೊಡಬಲ್ಲರು. ಇಲ್ಲವೆ ಅವರು ನಡೆಯಬೇಕಾದ ಹಾದಿಯನ್ನು ತೋರಿಸಿ, ಅದರಲ್ಲಿ ಸಾಗಲು ಬೇಕಾದ 'ಬಲ'ವನ್ನು ಕೊಡಬಹುದು. ಇದು ಏನೇ ಇರಲಿ, ಶಕ್ತಿಯನ್ನು ಕೊಡುವಾತ; ತಾನು ಕೊಡುವ ಶಕ್ತಿಯನ್ನು ಗ್ರಹಿಸುವಷ್ಟಾದರೂ ಜೀವಸತ್ವೆಯನ್ನು ಆಕ್ರಮಿಸಿ, ತನ್ನ ಪ್ರಭಾವವನ್ನು ಪಡೆಯುವಾತನಲ್ಲಿ ಪ್ರತಿಷ್ಠಾಪಿಸಬೇಕಾಗುತ್ತದೆ! ಇಂಥ 'ಶಕ್ತಿಪಾತ'ವನ್ನು ಎರಡು ಬಗೆಯಾಗಿ ಗುರು ನೀಡಬಹುದು. ಒಂದು ಸ್ಪರ್ಶದಿಂದ; ಮತ್ತೊಂದು ದರ್ಶನದಿಂದ! ಕೆಲವರು ಮಾತಿನ ಮೂಲಕವೂ ನೀಡಬಹುದೆಂದು ಅಭಿಪ್ರಾಯಪಡುತ್ತಾರೆ. ಆದರೆ, 'ಸ್ಪರ್ಶ'ದಿಂದ ಆಗುವ ಶಕ್ತಿಪಾತ ಪ್ರಕ್ರಿಯೆ ಬಲವತ್ತರವಾದುದು; ದರ್ಶನದಿಂದ ನಡೆಯುವ ಶಕ್ತಿಪಾತ ಪ್ರಕ್ರಿಯೆ ಮತ್ತೊಂದು ರೀತಿಯಲ್ಲಿ ಬಲವತ್ತರವಾದುದೇ ಸೈ. ಅಲ್ಲಮಪ್ರಭು ಅನಿಮಿಷದೇವರಿಂದ ಪಡೆಯುವ 'ಶಕ್ತಿಪಾತ' ಪ್ರಕ್ರಿಯೆಗೆ ಉತ್ತಮ ಉದಾಹರಣೆ!

ತತ್ವಪದಕಾರರಲ್ಲಿ, ಶಿವಯೋಗಿಗಳಲ್ಲಿ, ಸಂನ್ಯಾಸಿಗಳಲ್ಲಿ 'ಶಕ್ತಿಪಾತ'ದ ನೆಲೆಗಳುಂಟು. ಯಾರು 'ಶಕ್ತಿಪಾತ' ಪಡೆಯುತ್ತಾರೋ ಅವರು ಶಕ್ತಿಪಾತ ನೀಡುವವರ ವಿಷಯದಲ್ಲಿ ಶ್ರದ್ಧೆ ಇರಬೇಕು. ಆಗ ಶಕ್ತಿಪಾತ ಪಡೆಯುವವನ ಜೀವಸತ್ವೆಯಲ್ಲಿ ಆ ಶಕ್ತಿಯು ಪ್ರತಿಷ್ಠಾಪನೆಗೊಳ್ಳಲು ಅನುಕೂಲವಾಗುತ್ತದೆ. ಆ ಅನುಭವವು ನಿಚ್ಚಳವಾಗಿ ಪಡೆಯುವವನಲ್ಲಿಯೂ ಅದು ಉಂಟಾಗುತ್ತದೆ. ಹೀಗೆ, 'ಶಕ್ತಿಪಾತ'ದ ಪ್ರಪಂಚ ಅನೂಹ್ಯ! ಅಮೋಘ!

■ ಪುರಂಜೀವಿ

## ಮಾತೇ ಮುತ್ತು

- ಅಜ್ಞಾನವು ಒಂದು ವಸ್ತು ಅಲ್ಲ ಎಂಬುದು ವೇದಾಂತದ ಸಿದ್ಧಾಂತ. ಅದು ಒಂದು ವಸ್ತು ಎಂದಾದರೆ ಅದರಿಂದ ಉಂಟಾಗುವ ಪ್ರಪಂಚ, ಅದರಲ್ಲಿರುವ ಬಂಧವೇ ಮುಂತಾದವು ಸತ್ಯವೆಂದಾಗುತ್ತದೆ.

  –ರಮಣ ಮಹರ್ಷಿ
- ಬಲವೆಂಬುದು ದೈಹಿಕ ಸಾಮರ್ಥ್ಯದಿಂದ ಬರುವುದಿಲ್ಲ. ಅದಮ್ಯವಾದ ಸಂಕಲ್ಪದಿಂದ ಬರುತ್ತದೆ.

  –ಮಹಾತ್ಮ ಗಾಂಧಿ
- ಸತ್ಯಕ್ಕೆ ಜಯವೆಂಬ ಮಾತು ಕೂಡ ಉಂಟು, ಅದಕೂ ನಮಗೂ ಪುರಾತನ ನಂಟು.

  –ಗೋಪಾಲಕೃಷ್ಣ ಅಡಿಗ
- ನೀವು ಶಾಂತಿಯ ಅನುಭವವನ್ನು ಪಡೆಯಲು ಬಯಸುವುದಾದರೆ, ಬೇರೊಬ್ಬರಿಗೂ ಶಾಂತಿಯನ್ನು ಕೊಡಬೇಕು.

  –ದಲೈಲಾಮ
- ದುಡಿಮೆಗೆ ಗುರಿ ಇರಲಿ, ದುಡಿಯುವುದರಲ್ಲಿ ನಿಯಮವಿರಲಿ.

  –ಎಂ. ವಿಶ್ವೇಶ್ವರಯ್ಯ
- ಮನುಷ್ಯ ಚಿರಂಜೀವಿ ಆಗಲಾರ. ಆದರೆ, ಆತನ ಚಿಂತನೆಗಳು ಶಾಶ್ವತವಾಗಿ ಉಳಿಯುತ್ತವೆ. ಒಂದು ಗಿಡಕ್ಕೆ ನೀರು ಎಷ್ಟು ಅವಶ್ಯವೋ ಹಾಗೆಯೇ ಒಂದು ಚಿಂತನೆ ಪ್ರಸರಣವಾಗುವುದು ಅಷ್ಟೇ ಅಗತ್ಯ. ಇಲ್ಲದಿದ್ದರೆ ಎರಡೂ ಸಾಯುತ್ತವೆ.

  –ಬಿ.ಆರ್. ಅಂಬೇಡ್ಕರ್
- ಒಳ್ಳೆಯದನ್ನು ವರ್ಣಿಸುವಾಗ ಮಾತು ಹೆಚ್ಚಾಗಲಿ. ಅಲ್ಲದ್ದನ್ನು ಕಂಡಾಗ ಮಾತು ಕೊಂಚಾಗಲಿ.

  –ಬಿಎಂಶ್ರೀ